## ಶಿಕ್ಷಕರಿಗೆ ಇದರ ಪ್ರಸ್ತುತತೆ:

ಶಾಲಾ ಶಿಕ್ಷಣ ಪಡೆಯುವ ಅವಕಾಶ ಪಡೆದಿರುವ ಮಕ್ಕಳ ಜೀವನದಲ್ಲಿ ಶಾಲೆಯು ನಿರ್ಣಾಯಕ ಪಾತ್ರ ವಹಿಸುತ್ತದೆ. ಈ ಮಕ್ಕಳು ಶಾಲೆಯಲ್ಲಿ ಕಳೆಯುವ ಸಮಯವು ಆ ಮಕ್ಕಳ ಬೆಳವಣಿಗೆಯಲ್ಲಿ ಬಹು ಮುಖ್ಯ ಭಾಗವಾಗಿದೆ. ಹಾಗಾಗಿ ಶಾಲೆ ಮತ್ತು ಶಿಕ್ಷಕರಿಗೆ 'ಬೋಧನೆ' ಒಂದೇ ಕಾರ್ಯವಲ್ಲ, ಅದರೊಂದಿಗೆ ಮಕ್ಕಳ ಜೀವನದ 'ಬೆಳವಣಿಗೆಯ' ಹಂತದಲ್ಲಿಯೂ ಪ್ರಮುಖ ಪಾತ್ರವಿದೆ. ಆದ್ದರಿಂದ ಈ ಹಂತದಲ್ಲಿನ ಪ್ರಕ್ರಿಯೆಗಳು ಮತ್ತು ಕಾಳಜಿ ವಹಿಸಬೇಕಾದ ವಿಷಯಗಳನ್ನು ಅರ್ಥಮಾಡಿಕೊಳ್ಳುವುದು ಶಿಕ್ಷಕರಿಗೆ ಅವಶ್ಯವಾಗಿದೆ. ಶಾಲೆಯಲ್ಲಿನ ಅನುಭವಗಳಲ್ಲದೆ, ಮನೆಯಲ್ಲಿನ, ಕೆಲಸದಲ್ಲಿನ ಅನುಭವಗಳು, ಆಲೋಚನೆಗಳು ಮತ್ತು ನಮ್ಮ ದೇಹ ಎಲ್ಲವನ್ನೂ ಈ 'ಬೆಳವಣಿಗೆ'ಯ ಹಂತವು ಒಳಗೊಂಡಿದೆ. ಶಾಲೆಗೆ ಹೋಗದ ಮಕ್ಕಳಿಗೆ ತಮ್ಮ ಕೆಲಸದಲ್ಲಿ ಅಥವಾ ಸಮುದಾಯದಲ್ಲಿ ಇದೇ ರೀತಿಯ ಅನುಭವಗಳಾಗಬಹುದು.

ಈಗ ನಾವು ಶಿಕ್ಷಕರಾಗಲು ಕಲಿಯುತ್ತಿರುವಾಗ ಈ ಅನುಭವಗಳ ಬಗ್ಗೆ ಗಮನ ಹರಿಸುವುದು ಆಸಕ್ತಿದಾಯಕವಾಗಬಹುದು. ನಮ್ಮ ವಿದ್ಯಾರ್ಥಿಗಳನ್ನು ಚೆನ್ನಾಗಿ ಅರ್ಥ ಮಾಡಿಕೊಳ್ಳಲು ಇದು ಸಹಾಯಕವಾಗಬಹುದು ಎನಿಸುತ್ತದೆ. ಬಹುಶಃ ವಿದ್ಯಾರ್ಥಿಗಳಿಗೆ ಉತ್ತಮ ಅನುಭವಗಳನ್ನು ಕೊಡಲು ಸಾಧ್ಯವಾಗಬಹುದು. ಪ್ರಾಥಮಿಕ ಶಾಲಾ ಶಿಕ್ಷಕರಾಗಿ ನಾವು ಮಕ್ಕಳ ಜೊತೆಗೆ ಕೆಲಸ ಮಾಡುತ್ತಿರುತ್ತೇವೆ. ನಿರಂತರವಾಗಿ ನಾವು ಅವರ ಜೊತೆ ಒಡನಾಟ ಹೊಂದಿರಬೇಕಾಗುತ್ತದೆ, ಅವರಿಂದ ಕಲಿಯುತ್ತೇವೆ ಮತ್ತು ಕಲಿಸುತ್ತೇವೆ. ಶಿಕ್ಷಕ ತರಬೇತಿಯ ಮುಖ್ಯ ಉದ್ದೇಶ ಉತ್ತಮ ಶಿಕ್ಷಕರಾಗುವುದು ಮಾತ್ರವಲ್ಲ, ಮಕ್ಕಳು, ಶಾಲೆ, ಸಮಾಜ ಮತ್ತು ನಮ್ಮನ್ನು ನಾವೇ ಅರಿತುಕೊಳ್ಳುವು**ದೂ** ಆಗಿರುತ್ತದೆ. ನಮ್ಮ ಬಾಲ್ಯವನ್ನು ಹಿಂತಿರುಗಿ ನೋಡುವ ಮೂಲಕ ಈ ಪ್ರಕ್ರಿಯೆಯನ್ನು ಪ್ರಾರಂಭಿಸೋಣ.

ಅಭ್ಯಾಸ

1. ನಿಮ್ಮ ಬಾಲ್ಯವನ್ನು ನೆನಪಿಸಿಕೊಳ್ಳಿ. ನಿಮ್ಮ ಜೀವನದಲ್ಲಿ ಶಾಲೆಯು ಒಂದು ಪಾತ್ರ ವಹಿಸಿದೆ ಎಂದು ಭಾವಿಸುವಿರಾ**?** ಹೇಗೆ**?**

....................................................................................................................................

....................................................................................................................................

..........................................................................................................................................................

......................................................------------------------------------------------------------------

5.4.2 **ಮಕ್ಕಳ ಬೆಳವಣಿಗೆಯ/ವಿಕಾಸದ ಅರ್ಥ**:


ಶೈಶವ - ಹುಟ್ಟಿನಿಂದ **18** ತಿಂಗಳು

ಆರಂಭಿಕ ಬಾಲ್ಯ - **18** ತಿಂಗಳಿನಿಂದ- **6** ವರ್ಷ

**ಮ**ಧ್ಯ ಬಾಲ್ಯ - **6 - 13** ವರ್ಷ

ಹದಿಹರೆಯ - **13 -18** ವರ್ಷ

ವಯಸ್ಕರು - **18** ವರ್ಷದ ನಂತರ



ಚಿತ್ರ : **5. 1** ಮಾನವ ಬೆಳವಣಿಗೆಯ ಹಂತಗಳು

'ಬೆಳವಣಿಗೆ'ಯ ಪ್ರಕ್ರಿಯೆ ಎಂದು ನಾವು ಯಾವುದನ್ನು ಹೇಳುತ್ತೇವೋ ಅದನ್ನು ಮನಶ್ಶಾಸ್ತ್ರದಲ್ಲಿ 'ವಿಕಾಸ' ಎಂದು ಹೇಳಲಾಗಿದೆ. 'ವಿಕಾಸ' ಎಂಬ ಪದವು (ಜೀವಿಗಳಿಗೆ ಸಂಬಂಧಿಸಿದಂತೆ) ಮಾನವನಲ್ಲಿ (ಅಥವಾ ಪ್ರಾಣಿಗಳಲ್ಲಿ) ಗರ್ಭಧಾರಣೆಯಿಂದ

ಮರಣದವರೆಗೆ ಉಂಟಾಗುವ ನಿಗದಿತ ಬದಲಾವಣೆಗಳನ್ನು ಸೂಚಿಸುತ್ತದೆ. ಈ ಪಾರಿಭಾಷಿಕ ಪದವು ಎಲ್ಲಾ ಬದಲಾವಣೆಗಳಿಗೆ ಅನ್ವಯವಾಗುವುದಿಲ್ಲ, ಬದಲಾಗಿ ಕ್ರಮಬದ್ಧವಾದ ಹಾಗೂ ಗಣನೀಯವಾಗಿ ದೀರ್ಘಾವಧಿಯವರೆಗೆ ಉಳಿಯು**ವ** ಬದಲಾವಣೆಗಳಿಗೆ ಅನ್ವಯವಾಗುತ್ತದೆ. ಈ ಬದಲಾವಣೆಗಳು ಕಾಲಾನುಕ್ರಮದಲ್ಲಿ ಆಗುತ್ತವೆ ಮತ್ತು ಜೀವನದ ಭಾಗವಾಗುತ್ತವೆ. ತಾತ್ಕಾಲಿಕ ಬದಲಾವಣೆಗಳು ವಿಕಾಸದ ಮೇಲೆ ಪರಿಣಾಮ ಬೀರಬಹುದಾದರೂ ಅವುಗಳು ವಿಕಾಸವಾಗುವುದಿಲ್ಲ. ಉದಾಹರಣೆಗೆ, ಶೀತ ಜ್ವರ ಇದ್ದರೆ, ನಮ್ಮ ಧ್ವನಿ ಬದಲಾಗಬಹುದು, ನಮ್ಮ ನಡವಳಿಕೆಯೂ ಸ್ವಲ್ಪ ಬದಲಾಗಬಹುದು, ಕೆಲಸ ಮಾಡುವ ನಮ್ಮ ಸಾಮರ್ಥ್ಯವೂ ಬದಲಾಗಬಹುದು. ಇದಲ್ಲದೆ ತಾತ್ಕಾಲಿಕವಾಗಿ ನಮ್ಮ ಮನಸ್ಥಿತಿಯೂ ಬದಲಾಗುತ್ತದೆ. ಆದರೆ ಇದು ಯಾವುದೂ ಶಾಶ್ವತವಾದ ಬದಲಾವಣೆಯಲ್ಲ. ಅವುಗಳು ಸ್ವಲ್ಪ ಸಮಯದಲ್ಲಿ ಕಾಣೆಯಾಗುತ್ತವೆ, ಆದ್ದರಿಂದ ಇವುಗಳನ್ನು 'ವಿಕಾಸ' ಎನ್ನಲು ಸಾಧ್ಯವಿಲ್ಲ.

ಅಭ್ಯಾಸ

**2.** ಒಂದು ಮಗು ಮೆಟ್ಟಲಿನಿಂದ ಜಾರಿ ಬಿದ್ದು ಕಾಲಿಗೆ ಗಾಯ ಮಾಡಿಕೊಂಡಿದೆ ಎಂದುಕೊಳ್ಳೋಣ. ಅದಕ್ಕೆ ಕೆಲವು ದಿನ ನಡೆಯಲು ಆಗುವುದಿಲ್ಲ. ಆದರೆ ಬೇಗನೆ ಗುಣಮುಖವಾಗಿ ಅದು ದಿನನಿತ್ಯದ ಚಟುವಟಿಕೆಗಳನ್ನು ಪ್ರಾರಂಭಿಸುತ್ತದೆ. ಈ ಬದಲಾವಣೆಯನ್ನು ವಿಕಾಸ ಎನ್ನಬಹುದೇ**?** ಏಕೆ**?**

..........................................................................................................................................

..........................................................................................................................................

..........................................................................................................................................

..................................................

ಮನಶ್ಶಾಸ್ತ್ರಜ್ಞರು ಯಾವ ಬದಲಾವಣೆಗಳನ್ನು 'ವಿಕಾಸ' ಎನ್ನಬಹುದು ಎಂಬುದನ್ನು ನಿರ್ಧರಿಸಲು ವಿಶ್ಲೇಷಣೆ ಮಾಡುತ್ತಾರೆ. ಆ ಪ್ರಕಾರ, ಮುಖ್ಯವಾಗಿ ಬಾಲ್ಯದಲ್ಲಿ ಆಗುವಂತಹ ಈ ಕೆಳಗಿನ ಅಂಶಗಳನ್ನೊಳಗೊಂಡಂತಹ ಬದಲಾವಣೆಗಳನ್ನು 'ವಿಕಾಸ' ಎನ್ನಬಹುದು. ಅವುಗಳೆಂದರೆ:

- ಕಾಲಾನುಕ್ರಮದಲ್ಲಿ ಆಗುವ ಶಾಶ್ವತ ಬದಲಾವಣೆ.
- ಹೊಂದಾಣಿಕೆ ಮಾಡಿಕೊಳ್ಳುವಂತಹ, ಕ್ರಮಬದ್ಧವಾದ ಮತ್ತು ಸಂಕೀರ್ಣವಾದ ವರ್ತನೆಗಳು **(**Woolfolk, 2004, ಪುಟ 58)**.**

ಈ ಬದಲಾವಣೆಗಳು ಅವುಗಳ ಜೊತೆಗೆ 'ವಿಕಾಸ' (evolution) ಎಂಬ ಭಾವವನ್ನು ಅಂಟಿಸಿಕೊಂಡಿರುತ್ತವೆ. ಅಂದರೆ, ಮಕ್ಕಳು ವಿಕಾಸ ಹೊಂದಿ ವಯಸ್ಕರಾಗುತ್ತಾರೆ. ವಯಸ್ಕರು ಹೊಂದಾಣಿಕೆ ಮಾಡಿಕೊಳ್ಳುವ ಹಾಗೆ, ಕ್ರಮಬದ್ಧ ಹಾಗೂ ಸಂಕೀರ್ಣವಾಗಿರುತ್ತವೆ ಎಂದು ಭಾವಿಸಲ್ಪಟ್ಟಿದೆ (ಈ ದೃಷ್ಟಿಕೋನದ ವಿಮರ್ಶೆಯೂ ಆಗಿರಬಹುದು). ಮಾನವನ ವಿಕಾಸದ ಅಧ್ಯಯನವನ್ನು ಸಾಮಾನ್ಯವಾಗಿ ಮಾನವ ವಿಕಾಸ ಮನೋವಿಜ್ಞಾನ ಮತ್ತು ಮಾನವ ಅಭಿವೃದ್ಧಿ ಕ್ಷೇತ್ರಗಳೆಂದು ಅಧ್ಯಯನ ಮಾಡಲಾಗುತ್ತದೆ.

ಮಕ್ಕಳ ವಿಕಾಸವು, ನಿರ್ದಿಷ್ಟವಾಗಿ, ಜೀವನದ ಮೊದಲ ಎರಡು ದಶಕಗಳಲ್ಲಿ ಆಗುವ ಬದಲಾವಣೆಗಳನ್ನು ಅಧ್ಯಯನ ಮಾಡುವ ಒಂದು ಕ್ಷೇತ್ರವಾಗಿದೆ (Berk, 2006**).** ಇದು ಬೆಳವಣಿಗೆಯಲ್ಲಿ ಇರುವಂತಹ ಪ್ರಕ್ರಿಯೆಗಳೇನು**?** **(**ದೈಹಿಕ, ಸಾಮಾಜಿಕ, ಮಾನಸಿಕ, ಸಾಂ**ಸ್ಕೃ**ತಿಕ) ಬೆಳವಣಿಗೆಯ ಮೇಲೆ ಪರಿಣಾಮ ಬೀರುವ ಕಾರಕಾಂಶಗಳು ಯಾವುವು**?** ಬೆಳವಣಿಗೆಯಲ್ಲಿನ ಸಾಮಾನ್ಯಾಂಶ ಹಾಗೂ ಭಿನ್ನವಾದ ಅಂಶಗಳೇನು**?** ಎಬುದನ್ನು ಗಮನಿಸುತ್ತದೆ. ಒಟ್ಟಿನಲ್ಲಿ, ಮಕ್ಕಳ ಸರ್ವತೋಮುಖ ಬೆಳವಣಿಗೆಯನ್ನು ಅಧ್ಯಯನ ಮಾಡುವುದು ಇದರ ಉದ್ದೇಶ.

### 5.4.3 **ವಿಕಾಸದ/ಬೆಳವಣಿಗೆಯ ವಿವಿಧ ಅಂಶಗಳು/ಆಯಾಮಗಳು**:

ವಿಕಾಸದ ಅಧ್ಯಯನವನ್ನು ಸ್ಥೂಲವಾಗಿ ಮೂರು ವಿಭಾಗಗಳನ್ನಾಗಿ ಮಾಡಲಾಗಿದೆ (ವಾಸ್ತವವಾಗಿ ಅವುಗಳು ಪರಸ್ಪರ ಸಂಬಂಧಿತವಾಗಿವೆ ಮತ್ತು ಪರಸ್ಪರ ಸೇರಿಕೊಂಡಿವೆ) (Berk, 2006)**:**

- ದೈಹಿಕ ಬೆಳವಣಿಗೆ: ದೇಹದ ಗಾತ್ರ, ಪ್ರಮಾಣ, ದೇಹ ವ್ಯವಸ್ಥೆಯ ಕಾರ್ಯವಿಧಾನ, ಚಲನಾ ಸಾಮರ್ಥ್ಯಗಳು (motor capacities) ಇತ್ಯಾದಿ.
- ಸಂಜ್ಞಾನಾತ್ಮಕ ಬೆಳವಣಿಗೆ: ಬೌದ್ಧಿಕ ಸಾಮರ್ಥ್ಯದಲ್ಲಿನ ಬದಲಾವಣೆಗಳು, ಆಲೋಚನೆಗಳು, ನಮ್ಮ ಸುತ್ತಲಿನ ಪ್ರಪಂಚವನ್ನು ಅರ್ಥ ಮಾಡಿಕೊಳ್ಳುವುದು

ಇತ್ಯಾದಿ. ಕೆಲವು ಅಧ್ಯಯನಕಾರರು ಭಾಷಾ ಬೆಳವಣಿಗೆಯೂ ಸಂಜ್ಞಾನಾತ್ಮಕ ಬೆಳವಣಿಗೆಯ ಒಂದು ಭಾಗವೆಂದು ವಿಶ್ಲೇಷಿಸುತ್ತಾರೆ.

- ಭಾವನಾತ್ಮಕ, ಸಮಾಜೋ-ಸಾಂಸ್ಕೃತಿಕ ಮತ್ತು ನೈತಿಕ ಬೆಳವಣಿಗೆ: ತಮ್ಮನ್ನು ತಾವೇ ಅರಿತುಕೊಳ್ಳುವುದು ಮತ್ತು ತಮಗೆ ತಾವೇ ಹಾಗೂ ತಮ್ಮ ಸುತ್ತಲಿನ ಜನರೊಂದಿಗೆ ಸಂಬಂಧ ಕಟ್ಟಿಕೊಳ್ಳುವುದು, ಭಾವನೆಗಳು, ಮೌಲ್ಯಗಳು, ಭಾಷೆ, ಅಸ್ಮಿತೆ ಇತ್ಯಾದಿಗಳಲ್ಲಿನ ಬದಲಾವಣೆಗಳು. ಇವುಗಳ ಮೇಲೆ ಅವರು ವಾಸ ಮಾಡುವ ಸಾಂಸ್ಕೃತಿಕ ಸನ್ನಿವೇಶವು ನಿರ್ಣಾಯಕ ಪ್ರಭಾವ ಬೀರುತ್ತದೆ, ಆಗಿದ್ದರೂ ಈ ವಿಭಾಗವು ಗಮನಾರ್ಹವಾಗಿ ಗುರುತಿಸಲ್ಪಟ್ಟಿಲ್ಲ.

- ಇವುಗಳನ್ನು ಮುಂದೆ ಇನ್ನೂ ಹೆಚ್ಚಿನದಾಗಿ ಅಧ್ಯಯನ ಮಾಡುತ್ತೇವೆ. ಆದರೆ ಈ ಮೂರೂ ಅಂಶಗಳೂ ಪರಸ್ಪರ ಸಂಬಂಧಪಟ್ಟಿವೆ. ಅವುಗಳನ್ನು ಪ್ರತ್ಯೇಕಿಸಲು ಸಾಧ್ಯವಿಲ್ಲದಷ್ಟು ಅವುಗಳು ಪರಸ್ಪರ ಪರಿಣಾಮ ಬೀರುತ್ತವೆ. ಇನ್ನೂ ಹೆಚ್ಚಿನ ಅಧ್ಯಯನ ಮಾಡುವುದಕ್ಕಾಗಿ ನಾವು ಅವುಗಳನ್ನು ವಿಭಾಗಿಸುತ್ತೇವೆ. ಇವುಗಳಲ್ಲದೆ, ಬೆಳವಣಿಗೆಯ ಈ ಅಂಶಗಳ ಮೇಲೆ ಪ್ರಭಾವ ಬೀರುವ ಹಲವಾರು ಕಾರಕಾಂಶಗಳಿವೆ. ಅವುಗಳೆಂದರೆ, ಪರಿಸರದ ಅಂಶಗಳಾದ ಪೌಷ್ಟಿಕತೆ, ಗಾಯ, ಅಪಘಾತವಾಗುವುದು, ಆರೋಗ್ಯ, ಸಮಾಜೋ-ಆರ್ಥಿಕ ಸ್ಥಿತಿಗತಿಗಳು, ಸಾಮಾಜಿಕ ಸಂಬಂಧಗಳು, ಸಂಸ್ಕೃತಿ, ಲಿಂಗ ಇತ್ಯಾದಿ. ಅದರೊಂದಿಗೆ ಅನುವಂಶಿಕತೆಯು ಬೆಳವಣಿಗೆಯ ಮೇಲೆ ಪರಿಣಾಮ ಬೀರುವ ಇನ್ನೊಂದು ಕಾರಕಾಂಶ.

### 5.4.4. **ಬೆಳವಣಿಗೆ ಮತ್ತು ವಿಕಾಸಗಳ ನಡುವಿನ ವ್ಯತ್ಯಾಸ**

ಈ ಲೇಖನದ ಮೊದಲ ಭಾಗದಲ್ಲಿ 'ವಿಕಾಸ'ವನ್ನು 'ಬೆಳವಣಿಗೆ' ಎಂದು ಹೇಳಿದ್ದೇವೆ. ಇದು ನಮಗೆ 'ಬೆಳವಣಿಗೆ' ಎಂಬ ಇನ್ನೊಂದು ಪರಿಕಲ್ಪನೆಯನ್ನು ನೆನಪಿಸುತ್ತದೆ. ಕೆಲವೊಮ್ಮೆ ಬೆಳವಣಿಗೆ ಮತ್ತು ವಿಕಾಸಗಳನ್ನು ಒಂದರ ಜಾಗದಲ್ಲಿ ಇನ್ನೊಂದನ್ನು ಬಳಸುತ್ತೇವೆ. ಈ ಕೆಳಗಿನ ಎರಡು ವಾಕ್ಯಗಳನ್ನು ಓದಿ:

- ನೇಹಾಳು ಬಹಳ ವೇಗವಾಗಿ ಬೆಳೆಯುತ್ತಿದ್ದಾಳೆ (developing)............. ನೋಡು ಅವಳು ಎಷ್ಟು ಎತ್ತರವಾಗಿದ್ದಾಳೆ, ಅವಳು ತಾನೇ ಕಪಾಟಿನ ಬಾಗಿಲು ತೆರೆಯುತ್ತಾಳೆ.

- ರಜತ್ ಬುದ್ಧಿವಂತ ಮಗುವಾಗಿ ಬೆಳೆದಿದ್ದಾನೆ (grown); ಅವನು ತನ್ನ ಸ್ನೇಹಿತರ ಬಗ್ಗೆ ಬಹಳ ಕಾಳಜಿ ವಹಿಸುತ್ತಾನೆ.

ಈ ಎರ**ಡೂ** ಬದಲಾವಣೆಗಳು ಮತ್ತು ಶಾಶ್ವತವಾಗಿ ಇಬ್ಬರೂ ಮಕ್ಕಳಲ್ಲಿ ಉಳಿಯುವಂತಹವುಗಳು. ಎರಡೂ ಕೂಡ ಮುಂದೆ ಹೆಚ್ಚು ಸಂಕೀರ್ಣ ವರ್ತನೆಗಳಿಗೆ ದಾರಿ ಮಾಡಿಕೊಡುವಂತಹವುಗಳು. ಆದ್ದರಿಂದ ಎರಡನ್ನೂ 'ವಿಕಾಸ' ಎಂದು ಹೇಳಬಹುದು, ಆದರೆ, ಜಾಗರೂಕತೆಯಿಂದ ವಿಶ್ಲೇಷಿಸಿದರೆ ಎರಡರಲ್ಲೂ ಸ್ವಲ್ಪ ವ್ಯತ್ಯಾಸವಿರುವುದನ್ನು ಗಮನಿಸಬಹುದು:

- ನೇಹಾಳು ಎತ್ತರವಾಗಿದ್ದಾಳೆ; ಇದು ದೈಹಿಕ ಬದಲಾವಣೆ. ಆದರೆ ರಜತ್ ಹೆಚ್ಚು ಕಾಳಜಿ ಮಾಡುವವನಾಗಿದ್ದಾನೆ, ಇದು ದೈಹಿಕ ಬದಲಾವಣೆಯಲ್ಲ.
- ನೇಹಾಳು ಎತ್ತರವಾಗುವುದು ಬಹಳಷ್ಟು ಮಟ್ಟಿಗೆ ಜೈವಿಕವಾದುದು ಹಾಗೂ ಅನುವಂಶೀಯತೆ ಮತ್ತು ಸ್ವಾಭಾವಿಕ ಗತಿಯ ಮೇಲೆ (ಪೌಷ್ಟಿಕಾಂಶ, ದೈಹಿಕ, ಸಮಾಜೋ-ಭಾವನಾತ್ಮಕ ಅವಶ್ಯಕತೆಗಳು ಪೂರೈಸಿದ್ದಾಗ) ಅವಲಂಬಿತವಾಗಿದೆ. ಆದರೆ, ಕಾಳಜಿ ವಹಿಸುವುದು ಎಂದರೆ ಭಾವನಾತ್ಮಕ ಬದಲಾವಣೆ ಮತ್ತು ಇದು ಅವನ ಸುತ್ತಲಿನ ಸಾಮಾಜಿಕ ಪರಿಸರದ ಮೇಲೆ ಅವಲಂಬಿತವಾಗಿದೆ (ಬೆಳವಣಿಗೆಗೆ ಪೂರಕವಾದ ಸ್ವಾಭಾವಿಕ ಪರಿಸ್ಥಿತಿಗಳು ಇದ್ದಾಗ).
- ನೇಹಾಳ ಎತ್ತರದಲ್ಲಿನ ಬದಲಾವಣೆಯನ್ನು ಸೆಂಟಿಮೀಟರ್ ಅಥವಾ ಇಂಚಿನಲ್ಲಿ ಅಳತೆ ಮಾಡಬಹುದು, ಆದರೆ ರಜತ್ ಎಷ್ಟು ಕಾಳಜಿವಹಿಸುತ್ತಾನೆ ಎಂದು ಯಾವುದಾದರೂ ವಿಧಾನದಲ್ಲಿ ಅಳತೆ ಮಾಡಬಹುದೇ? ಆದು ಸಾಧ್ಯವಿಲ್ಲವೆನಿಸುತ್ತದೆ.

ನೇಹಾಳಲ್ಲಿ ಆಗಿರುವ ಬದಲಾವಣೆಯು ಬೆಳವಣಿಗೆ. ಆದ್ದರಿಂದ ನೇಹಾಳು ವೇಗವಾಗಿ ಬೆಳೆಯುತ್ತಿದ್ದಾಳೆ (growing) ಎಂದು ಹೇಳುವುದು ಹೆಚ್ಚು ಸೂಕ್ತ. ಬೆಳವಣಿಗೆಯು ಹೆಚ್ಚು ಸ್ವಾಯತ್ತತೆಯಿಂದ ಆಗುವುದು ಮತ್ತು ಯಾವುದೇ ಬಾಹ್ಯ ಅಡಚಣೆಗಳಿಲ್ಲದಿದ್ದರೆ ಹೆಚ್ಚಾಗಿ ಅದು ಸ್ವಾಭಾವಿಕ/ಜೈವಿಕ ಕಾರಣಗಳು ಮತ್ತು ಅನುವಂಶೀಯತೆಯಿಂದ ಆಗುತ್ತದೆ. ಉದಾಹರಣೆಗೆ, ಒಂದು ಮಗು ಯಾವುದೇ ಅಪೌಷ್ಟಿಕತೆ, ಅಪಘಾತ, ಭಾವನಾತ್ಮಕ ಒತ್ತಡ, ದೈಹಿಕ ಚಟುವಟಿಕೆಗಳ ಮೊಟಕುಗೊಳಿಸುವಿಕೆ ಇತ್ಯಾದಿಗಳು ಇಲ್ಲದೆ ಇದ್ದಾಗ ಸ್ವಾಭಾವಿಕ ಕ್ರಮದಲ್ಲಿ ಎತ್ತರವಾಗುತ್ತದೆ. ಬೆಳವಣಿಗೆ ಎಂದು ಹೇಳುವಂತವುಗಳು ಪರಿಮಾಣಾತ್ಮಕವಾಗಿರುತ್ತವೆ. ಮಗುವಿನ ಇಂತಹ ಹೆಚ್ಚಿನ ಬೆಳವಣಿಗೆಗಳು ದೈಹಿಕ ಬೆಳವಣಿಗೆಯಲ್ಲಿ ಸೇರುತ್ತವೆ. ಆದ್ದರಿಂದ, 'ಬೆಳವಣಿಗೆ'ಯು ವಿಕಾಸದ ಅಂಗ ಎಂದು ಭಾವಿಸಬಹುದು. ರಜತ್‌ನ ಗಮನೀಯ ಬದಲಾವಣೆಯು

ಆಂತರಿಕವಾದುದು ಅಥವಾ ಅಗೋಚರವಾದುದು, ಮತ್ತು ಕೆಲವು ವರ್ತನೆಗಳ ಮೂಲಕ ಅದನ್ನು ಗಮನಿಸಬಹುದು. ಅವುಗಳು ಜೈವಿಕವಾದುದಕ್ಕಿಂತಲೂ ಹೆಚ್ಚು ಸಾಮಾಜಿಕ ಹಾಗೂ ವೈಯಕ್ತಿಕವಾದವು. ಮತ್ತು ಅವುಗಳು ಮುಂದಕ್ಕೂ ಅವನಲ್ಲಿ ಉಳಿದರೆ ಅವುಗಳನ್ನು ಸಾಮಾಜಿಕ/ವೈಯಕ್ತಿಕ ಬೆಳವಣಿಗೆ ಎನ್ನಬಹುದು. ಹಾಗಾಗಿ ವಿಕಾಸ ಮತ್ತು ಬೆಳವಣಿಗೆ**ಗ**ಳಲ್ಲಿ ವ್ಯತ್ಯಾಸವಿದೆ ಹಾಗೂ ಅವು ಪರಸ್ಪರ ಸಂಬಂಧಿಸಿವೆ.

ಬೆಳವಣಿಗೆಗೆ ಸಂಬಂಧಿಸಿದಂತೆ ಇನ್ನೊಂದು ಪರಿಕಲ್ಪನೆ ಇದೆ. ಕಲಿಕೆ (learning) ಎಂಬುದೇ ಈ ಪರಿಕಲ್ಪನೆ. ಈ ಕೆಳಗಿನ ಉದಾಹರಣೆಯನ್ನು ಗಮನಿಸಿ:

ಶಬನಮ್ ಶಾಲೆಗೆ ಹೊಸದಾಗಿ ಸೇರಿದಾಗ ತರಗತಿಯಲ್ಲಿ ಮಾತನಾಡಲು ತುಂಬಾ ಸಂಕೋಚಪಟ್ಟುಕೊಳ್ಳುತ್ತಿದ್ದಳು. ತಾನೇನಾದರೂ ತಪ್ಪು ಮಾತನಾಡಿದರೆ ಎಂದು ಭಯವಾಗುತ್ತಿತ್ತು ಎಂದು ಅವಳು ಈಗ ತನ್ನ ಸ್ನೇಹಿತೆಗೆ ಹೇಳುತ್ತಾಳೆ. ಆದರೆ, ಅವಳು ಇತರ ಮಕ್ಕಳು ನಿರ್ಭಯವಾಗಿ ಮಾತನಾಡುವುದನ್ನು ಗಮನಿಸಿದಳು. ಯಾರೂ ಅವರನ್ನು ತಮಾಷೆ ಮಾಡದಿರುವುದನ್ನು ಮತ್ತು ಶಿಕ್ಷಕರು ಮಕ್ಕಳ ಅಭಿವ್ಯಕ್ತಿಯನ್ನು ಯಾವಾಗಲೂ ಪ್ರೋತ್ಸಾಹಿಸುವುದನ್ನು ಅವಳು ನೋಡುತ್ತಿದ್ದಳು. ನಿಧಾನವಾಗಿ ಶಬನಮ್ ಕೂಡ ಪ್ರಶ್ನೆ ಕೇಳಲು, ಉತ್ತರಿಸಲು, ಮಾತನಾಡಲು ಮತ್ತು ಅಭಿವ್ಯಕಿಸಲು ಪ್ರಾರಂಭಿಸಿದಳು. ಈಗ ಅವಳು ಮಾತನಾಡಲು ಮುಂದಾಗುತ್ತಾಳೆ. ಕಳೆದ ವಾರ ಅವಳು ಆಶುಭಾಷಣದಲ್ಲಿ ಬಹುಮಾನವನ್ನೂ ಪಡೆದಳು.

ಈ ಉದಾಹರಣೆಯಲ್ಲಿ ಶಬನಮ್ ಬದಲಾಗಿರುವಂತೆ ಕಾಣುತ್ತದೆ. ಈ ಬದಲಾವಣೆ ಹೇಗೆ ಆಯಿತು? ಮಾತನಾಡುವ ಅನುಭವ ಹಾಗೂ ಇತರರು ಮಾತನಾಡುವಾಗ ಅವರನ್ನು ಗಮನಿಸುವುದರಿಂದ ಈ ಬದಲಾವಣೆ ಸಾಧ್ಯವಾಯಿತು. ಮತ್ತು ಈ ಬದಲಾವಣೆಯನ್ನು ಮಾತನಾಡಲು ಮುಂದಾಗುವ ಅವಳ ವರ್ತನೆಯಿಂದ ಗುರುತಿಸಬಹುದು. ಇಂತಹ ಬದಲಾವಣೆಯನ್ನು ಕಲಿಕೆ ಎನ್ನಬಹುದು. ವಿಶಾಲವಾದ ಅರ್ಥದಲ್ಲಿ, ಕಲಿಕೆಯು ಅನುಭವದ ಮೂಲಕ ವ್ಯಕ್ತಿಯ ಜ್ಞಾನ ಅಥವಾ ವರ್ತನೆಯಲ್ಲಿ ಉಂಟಾಗುವ ಶಾಶ್ವತ ಬದಲಾವಣೆ. ಇಂತಹ ಬದಲಾವಣೆಗಳು ಉದ್ದೇಶಪೂರಿತವಾಗಿರಬಹುದು ಅಥವಾ ಉದ್ದೇಶರಹಿತವಾಗಿರಬಹುದು, ಒಳ್ಳೆಯದು ಅಥವಾ ಕೆಟ್ಟದ್ದೂ ಆಗಿರಬಹುದು, ಪ್ರಜ್ಞಾಪೂರ್ವಕವಾಗಿರಬಹುದು, ಆಗಿಲ್ಲದೆಯೂ ಇರಬಹುದು. ಹೇಗಿದ್ದರೂ ಇದು ಅನುಭವದಿಂದ ಮಾತ್ರ ಬರುತ್ತದೆಯೇ ಹೊರತಾಗಿ

ಸ್ವಯಂಚಾಲಿತವಾಗಿ ಅನುವಂಶೀಯವಾಗಿ, (ಜೀನ್) ವಂಶವಾಹಿಗಳಿಂದ ಅಥವಾ ಪ್ರಕೃತಿಯಿಂದ ಬರುವುದಿಲ್ಲ.

ಈ ಬದಲಾವಣೆಯು ಬೆಳವಣಿಗೆ ಆಗಬಹುದೇ? ಆಗಬಹುದಾದರೆ ಕಲಿಕೆಯು ಹೇಗೆ ಬೆಳವಣಿಗೆಗಿಂತ ಭಿನ್ನವಾಗಿದೆ? ಕಲಿಕೆಯು ಬೆಳವಣಿಗೆಗೆ ಸಂಬಂಧಿಸಿದೆ, ಆದರೆ, ಸ್ವತಃ ಕಲಿಕೆಯು ಬೆಳವಣಿಗೆಯಾಗದಿರಬಹುದು. ಕಲಿಕೆ ಮತ್ತು ಬೆಳವಣಿಗೆಯ ಈ ಸಂಬಂಧದಲ್ಲಿ ಎರಡು ಅಂಶಗಳಿವೆ. ಮೊದಲನೆಯದು, ಕಲಿಕೆಯು ಬೆಳವಣಿಗೆಗೆ ಎಡೆಮಾಡಿಕೊಡಬಹುದು. ಎರಡನೆಯದಾಗಿ, ಬೆಳವಣಿಗೆಯು ಕಲಿಕೆಗೆ ಪೂರಕವಾದ ಪರಿಸ್ಥಿತಿಯನ್ನು ನಿರ್ಮಾಣ ಮಾಡಬಹುದು. ಉದಾಹರಣೆಗೆ, ಶಬನಮ್‌ಳ ಕಲಿಕೆಯು ತರಗತಿಯಲ್ಲಿನ ಸಾಮಾಜಿಕ ಪ್ರಕ್ರಿಯೆಯ ಬಗ್ಗೆ ಆಗಿತ್ತು, ಮತ್ತು ಈ ಕಲಿಕೆಯ ಆಧಾರದಲ್ಲಿ ಅವಳ ವರ್ತನೆಯಲ್ಲಿ ಬದಲಾವಣೆ ಆಯಿತು. ಇದು ಅವಳ ಸಾಮಾಜಿಕ ಬೆಳವಣಿಗೆಯನ್ನು ವೃದ್ಧಿಪಡಿಸುತ್ತದೆ. ಅದೇ ಹೊತ್ತಿಗೆ, ಅವಳು ಈ ಕಲಿಕೆಗೆ 'ಸಿದ್ಧಳಾಗಿ' ಇಲ್ಲದಿದ್ದರೆ ಇದನ್ನು ಕಲಿಯಲು ಸಾಧ್ಯವಾಗುತ್ತಿರಲಿಲ್ಲ. ಅಂದರೆ, ಶಬನಮ್‌ಳಿಗೆ ಇತರರೊಂದಿಗೆ ಬೆರೆಯುವ ಸಾಮರ್ಥ್ಯದ ಬೆಳವಣಿಗೆ ಆಗಿರದಿದ್ದರೆ ಅವಳಿಗೆ ಇದನ್ನು ಕಲಿಯಲು ಸಾಧ್ಯವಾಗುತ್ತಿರಲಿಲ್ಲ. ನಾವಿದನ್ನು ಘಟಕ 3 ರಲ್ಲಿ ಸಂಜ್ಞಾನಾತ್ಮಕ ಬೆಳವಣಿಗೆಯಲ್ಲಿ ವಿವರವಾಗಿ ಚರ್ಚಿಸೋಣ.

ಅಭ್ಯಾಸ

**4.** ಕಲಿಕೆಯು ಬೆಳವಣಿಗೆಗಿಂತ ಯಾವ ರೀತಿ ಭಿನ್ನವಾಗಿದೆ?

..........................................................................................................................

..........................................................................................................................

..........................................................................................................................

......................................................

## 5.5 **ಮಕ್ಕಳ ವಿಕಾಸವನ್ನು ಅರ್ಥ ಮಾಡಿಕೊಳ್ಳುವ ವಿಧಾನಗಳು**:

ಮಕ್ಕಳ ವಿಕಾಸವನ್ನು ಅರ್ಥ ಮಾಡಿಕೊಳ್ಳಲು ಹಲವು ದೃಷ್ಟಿಕೋನಗಳಿವೆ. ಇಲ್ಲಿ ಅವುಗಳಲ್ಲಿ ಎರಡನ್ನು ಚರ್ಚಿಸಲಾಗಿದೆ.

### 5.5.1 **ಜೀವನದ ಹಂತಗಳಲ್ಲಿ ವಿಕಾಸ**:

ಒಂದು ದೃಷ್ಟಿಕೋನದ ಪ್ರಕಾರ ಶಿಶು, ಶೈಶವ, ಬಾಲ್ಯವನ್ನು ವಯಸ್ಸಿಗನುಗುಣವಾಗಿ ವ್ಯಾಖ್ಯಾನಿಸುತ್ತಾರೆ. ಬೆಳವಣಿಗೆಯ ಪ್ರಕ್ರಿಯೆಯಲ್ಲಿ ಶಿಶುವಾಗಿರುವುದು ಒಂದು 'ಹಂತ' ಎಂದು ಪರಿಗಣಿಸಲಾಗಿದೆ. ಈ ದೃಷ್ಟಿಕೋನದಿಂದ ಈ ಪ್ರಕ್ರಿಯೆಯನ್ನು ಜೀವನದ ಹಂತಗಳ ಮೂಲಕ ವಿವರಿಸಲಾಗಿದೆ. ಮಾನವನ ವಿಕಾಸದ/ಬೆಳವಣಿಗೆಯ ಬಗ್ಗೆ ಜಾಗತಿಕವಾಗಿ ಗುರುತಿಸಲ್ಪಟ್ಟ ಒಂಬತ್ತು ಹಂತಗಳಿವೆ. ನಿಗದಿತ ವಯಸ್ಸಿನಲ್ಲಿ ಆಗುವ ಬೆಳವಣಿಗೆಯ ಸ್ವರೂಪದ ಆಧಾರದಲ್ಲಿ ಈ ಹಂತಗಳನ್ನು ವಿಭಾಗಿಸಲಾಗಿದೆ. ಹಾಗಿದ್ದರೂ,

- ಹಿಂದಿನ ಹಂತವು ಸಾಮಾನ್ಯವಾಗಿ ಮುಂದಿನ ಹಂತಕ್ಕೆ ಆಧಾರವಾಗುತ್ತದೆ.
- ಈ ಹಂತಗಳು ಸಮತಲವಾಗಿಯೂ, ಲಂಬವಾಗಿಯೂ ಆಗುವ ಬೆಳವಣಿಗೆಗಳನ್ನು ಸೂಚಿಸುತ್ತವೆ. ಅಂದರೆ, ಪ್ರತಿ ಹಂತವೂ ಇನ್ನೊಂದರಿಂದ ಹೆಚ್ಚು ಸಂಕೀರ್ಣವಾದುದು ಹಾಗೂ ಪ್ರತಿ ಹಂತದಲ್ಲೂ ಕೆಲವು ನಿರ್ದಿಷ್ಟ ಮೂಲಭೂತ ಬೆಳವಣಿಗೆಯ ಕಾರ್ಯಗಳಿವೆ.

ಬೆಳವಣಿಗೆಯ ಒಂಭತ್ತು ಹಂತಗಳನ್ನು ಈ ಕೆಳಗಿನ ಪಟ್ಟಿಯಲ್ಲಿ ಕೊಡಲಾಗಿದೆ.

| ಹಂತ | ವಯಸ್ಸು | ಶಿಕ್ಷಣದ ಹಂತ/ಆರೈಕೆ | ಬೆಳವಣಿಗೆಯ ಲಕ್ಷಣಗಳು |
|---|---|---|---|
| ಜನನ ಪೂರ್ವ | ಗರ್ಭಧಾರಣೆಯಿಂದ ಜನನದವರೆಗೆ | ಜನನ ಪೂರ್ವ ಆರೈಕೆ | ಒಂದು ಜೀವಕೋಶದಿಂದ ಮಾನವ ಶಿಶುವಾಗುವವರೆಗೆ ಶೀಘ್ರಗತಿಯ ಬೆಳವಣಿಗೆ |
| ಶೈಶವ | 0-1 ವರ್ಷದವರೆಗೆ | ಆರಂಭಿಕ ಬಾಲ್ಯದ ಆರೈಕೆ ಮತ್ತು ಶಿಕ್ಷಣ (ECCE) | ದೈಹಿಕ ಮತ್ತು ಮೆದುಳಿನ ಶೀಘ್ರಗತಿಯ ಬದಲಾವಣೆ ಸಾಮಾಜಿಕ ಸಂಬಂಧಗಳ ಆರಂಭ |
| ಆರಂಭಿಕ ಬಾಲ್ಯ | 1-3 ವರ್ಷದವರೆಗೆ | ECCE ಮತ್ತು ಶಾಲಾಪೂರ್ವ | ಭಾಷೆಯ ಮೊದಲ ಸಂಕೇತಗಳು ಉತ್ತಮ ಚಲನಾ ಕೌಶಲಗಳು (motor skills) |
| ಮಧ್ಯ ಬಾಲ್ಯಾವಧಿ | 6-11 ವರ್ಷದವರೆಗೆ | ಪ್ರಾಥಮಿಕ | ಗಣನೀಯವಾಗಿ ಸುಧಾರಣೆಗೊಂಡ ದೈಹಿಕ ಸಾಮರ್ಥ್ಯಗಳು, ಹೆಚ್ಚು ತಾರ್ಕಿಕ ಆಲೋಚನೆಗಳು, |

| | | | |
|---|---|---|---|
| | | | ನೈತಿಕತೆ, ಅಸ್ಮಿತೆಯ ಹುಡುಕಾಟ |
| ಹದಿವಯಸ್ಸು | 11-18 ವರ್ಷದವರೆಗೆ | ಪ್ರಾಥಮಿಕ/ಮಾಧ್ಯಮಿಕ/ಪ್ರೌಢಶಾಲೆ | ಹರೆಯ, ಲೈಂಗಿಕ ಪಕ್ವತೆ, ಅಮೂರ್ತ ಆಲೋಚನೆಗಳು, ಅಸ್ಮಿತೆಯ ಹುಡುಕಾಟ |
| ಯೌವನ ಮತ್ತು ಯುವ ಪ್ರೌಢಾವಸ್ಥೆ | 18-45 ವರ್ಷದವರೆಗೆ | ಉನ್ನತ ಶಿಕ್ಷಣ- ಉದ್ಯೋಗ | ಯೌವನ- ಕಾನೂನಬದ್ಧವಾಗಿ ಪ್ರೌಢ ವ್ಯಕ್ತಿ, ದೈಹಿಕ-ಮಾನಸಿಕ ವ್ಯವಸ್ಥೆಗಳ ಪೂರ್ಣ ಬೆಳವಣಿಗೆ, ಆತ್ಮೀಯ ಸಂಬಂಧಗಳ ಹುಡುಕಾಟ -ಪ್ರೌಢಾವಸ್ಥೆ-ಮುಂದಿನ ಸಂತತಿಯ ಬಗ್ಗೆ ಕಾಳಜಿ, ಸಂತಾನೋತ್ಪತ್ತಿ ಕಾರ್ಯ |
| ಮಧ್ಯ ವಯಸ್ಸು | 45-60/65 ವರ್ಷದವರೆಗೆ | ಉದ್ಯೋಗ | ಉದ್ಯೋಗ, ಋತುಬಂಧ, ನೈತಿಕತೆಯಲ್ಲಿ ಬದಲಾವಣೆ, ಆಧುನಿಕ ಸಾಮಾಜಿಕ ಸಂಬಂಧಗಳು |
| ವೃದ್ಧಾಪ್ಯ | 60/65 ವರ್ಷದವರೆಗೆ | ವೃದ್ಧಾಪ್ಯದ ಆರೈಕೆ | ನಿವೃತ್ತಿ, ದೈಹಿಕ ಸಾಮರ್ಥ್ಯಗಳಲ್ಲಿ ಗಮನಾರ್ಹ ಇಳಿಕೆ, ಒಡನಾಡಿಗಾಗಿ ಹುಡುಕಾಟ, ಜೀವನಾನುಭವಗಳನ್ನು ಮೆಲುಕು ಹಾಕುವುದು |

ಬೆಳವಣಿಗೆಯನ್ನು ಈ ರೀತಿ ಅರ್ಥಮಾಡಿಕೊಂಡಾಗ ಮಗು ಬೆಳೆಯುತ್ತಾ ಹೋದಂತೆ ವಯಸ್ಸಿಗನುಗುಣವಾಗಿ ವಿವಿಧ ಹಂತಗಳಲ್ಲಿ ಮೇಲೆ ಮೇಲೆ ಹೋಗುತ್ತದೆ ಎಂದು ಭಾವಿಸಬಹುದು. ಆ ಪ್ರಕಾರ, ಹಿಮ್ಮುಖ ಚಲನೆ ಸಾಧ್ಯವಿಲ್ಲವೆಂದು ಭಾವಿಸಬಹುದು.

### 5.5.2 **ಅಖಂಡ ಬೆಳವಣಿಗೆ/ವಿಕಾಸ ಮತ್ತು ಒಂದು ಆವರ್ತ ಪ್ರಕ್ರಿಯೆ**

**(**Development on a continuum and as a spiral process)

ವಿಕಾಸದ ಹಂತದ ಮಾದರಿಯು ಮಗುವಿನ ವಿಕಾಸವನ್ನು ಅರಿತುಕೊಳ್ಳುವ ಸಾಮಾನ್ಯ ವಿಧಾನವಾಗಿದೆ. ಹಾಗಿದ್ದರೂ, ವಿಕಾಸವು ಹಂತ ಹಂತವಾಗಿ ಆಗುವ

ಪ್ರಕ್ರಿಯೆ ಎಂಬುದರ ಬಗ್ಗೆ ಹಲವಾರು ವಿಮರ್ಶೆಗಳಿವೆ. ವಿಕಾಸವು ಸ್ಪಷ್ಟವಾದ ಹಂತಗಳ ಮೂಲಕ ಆಗುವುದಿಲ್ಲವೆಂದು ಹೆಚ್ಚು ಹೆಚ್ಚು ಅರ್ಥಮಾಡಿಕೊಳ್ಳಲಾಗುತ್ತಿದೆ. ಅದು ವಯಸ್ಸಿಗನುಗುಣವಾಗಿ ವಿಭಾಗಿಸಲು ಸಾಧ್ಯವಿಲ್ಲದಂತಹ ನಿರಂತರ ಪ್ರಕ್ರಿಯೆ. ಅದು ಅಖಂಡವಾಗಿ ಆಗುತ್ತದೆ. ಈ ನಿರಂತರ ಪ್ರಕ್ರಿಯೆಯು ಶೈಶವದಲ್ಲಿ ಪ್ರಾರಂಭವಾಗಿ ವೃದ್ಧಾಪ್ಯದವರೆಗೆ ವಿಕಾಸವಾಗುತ್ತಾ ಮುಂದುವರಿಯುತ್ತದೆ. ಕೆಲವು ಸಿದ್ಧಾಂತಕಾರರು ಹೇಳುವ ಪ್ರಕಾರ, ಒಂದು ಸುರುಳಿಯು (ಒಂದು ಸ್ಪ್ರಿಂಗ್‌ನ ಆಕಾರ) ವಿಕಾಸದ ಪ್ರಕ್ರಿಯೆಯನ್ನು ಚೆನ್ನಾಗಿ ಚಿತ್ರಿಸುತ್ತದೆ. ಅವ**ರು** ಹೇಳುವ ಪ್ರಕಾರ, ವಿಕಾಸವು ಮೇಲ್ಮುಖವಾಗಿ ಒಂದು ಸುರುಳಿಯಂತೆ ಸುತ್ತುತ್ತಾ ಹೊರಹೊಮ್ಮುತ್ತದೆ. ಸುರುಳಿಯಲ್ಲಿ ಹಿಮ್ಮುಖ ಚಲನೆಯೂ ಸಾಧ್ಯವಿರುವುದನ್ನೂ ಅವರು ಅಲ್ಲಗಳೆಯುವುದಿಲ್ಲ. ವಿಕಾಸದ ಲಕ್ಷಣಗಳಿಗೆ ವಯಸ್ಸಿನ ಸಂಬಂಧವಿರುವುದೂ ಟೀಕೆಗೊಳಪಟ್ಟಿದೆ. ಉದಾಹರಣೆಗೆ, ಕೆಲವು ಮಕ್ಕಳಲ್ಲಿ ಭಾಷಾ ಬೆಳವಣಿಗೆಯ ಲಕ್ಷಣಗಳು ಆರಂಭಿಕ ಬಾಲ್ಯ ಅಥವಾ ಮಧ್ಯ ಬಾಲ್ಯಾವಧಿಯಲ್ಲಿ ಕಾಣಿಸುವುದಿಲ್ಲ, ಬದಲಾಗಿ ಉತ್ತಮವಾಗಿಯೇ ಬೆಳವಣಿಗೆಯಾದ ಭಾಷಾ ವ್ಯವಸ್ಥೆಯು ಉತ್ತರ ಬಾಲ್ಯಾವಧಿಯಲ್ಲಿ ಕಾಣಿಸಿಕೊಳ್ಳುತ್ತದೆ. ಇದಲ್ಲದೆ, ಮಕ್ಕಳ ವಿಕಾಸವು ಸಂಸ್ಕೃತಿಯಿಂದ ಸಂಸ್ಕೃತಿಗೆ ಬದಲಾಗುತ್ತದೆ. ಇಂತಹ ಚರ್ಚೆಗಳು ವಿಕಾಸದ ಪ್ರಕ್ರಿಯೆಯ ಸುತ್ತಲೂ ಇವೆ. ಅವುಗಳಲ್ಲಿ ಕೆಲವನ್ನು ಈ ಕೆಳಗೆ ಕೊಡಲಾಗಿದೆ.

### 5.6 **ವಿಕಾಸದ ಬಗ್ಗೆ ಚರ್ಚೆಗಳು**

ಮಗುವಿನ ವಿಕಾಸದ ಬಗ್ಗೆ ಹಲವಾರು ಸಂಶೋಧನೆಗಳು ನಡೆದಿದ್ದರೂ, ವಿಕಾಸದ ಪ್ರಕ್ರಿಯೆಯನ್ನು ಉತ್ತಮವಾಗಿ ವ್ಯಾಖ್ಯಾನ ಮಾಡಿದ ಒಂದು ಸಂಶೋಧನೆಯೂ ಇಲ್ಲ. ಹಲವಾರು ಚರ್ಚೆಗಳಿಂದ ಆಯ್ದ ಕೆಲವು ಮುಖ್ಯಾಂಶಗಳು ಈ ಕೆಳಗಿನಂತಿವೆ:

**ಪ್ರಕೃತಿ ಮತ್ತು ಸಾಮಾಜಿಕ ಪರಿಸರದ ಚರ್ಚೆ**:

ಪ್ರಕೃತಿ ಮತ್ತು ಸಾಮಾಜಿಕ ಪರಿಸರಗಳೆರಡೂ ವಿಕಾಸದ ಮೇಲೆ ಮಹತ್ವದ ಪಾತ್ರ ವಹಿಸುತ್ತವೆ ಎಂಬುದರ ಬಗ್ಗೆ ಸಾಕಷ್ಟು ಸಮ್ಮತಿ ಇದೆ (ದೈಹಿಕ ಬೆಳವಣಿಗೆಯು ಹೆಚ್ಚಿನ ಮಟ್ಟದಲ್ಲಿ ಅನುವಂಶೀಯವಾಗಿ ನಿರ್ಧರಿತವಾಗಿರುತ್ತದೆ ಎಂದು ಹೇಳಿದರೂ ಆರೋಗ್ಯಕರ ಸಮತೋಲನದ ಪರಿಸರದ ಅವಶ್ಯಕತೆಯೂ ಇದೆ.) ಆದರೆ, ಇವೆರಡರಲ್ಲಿ ಯಾವುದು ಹೆಚ್ಚು ಮುಖ್ಯ, ಪ್ರಕೃತಿಯೇ ಅಥವಾ ಪೋಷಣೆಯೇ**?** ಎಂಬುದು ಚರ್ಚೆಯ ವಿಷಯ.

**ನಿರಂತರ ಬೆಳವಣಿಗೆಗೆ ಪ್ರತಿಯಾಗಿ ಹಂತ ಹಂತವಾಗಿ ಆಗುವ ಬಾಲ್ಯದಿಂದ ಪೌಢಾವಸ್ಥೆಯವರೆಗಿನ ಬೆಳವಣಿಗೆ:**

ಈ ಮೇಲೆ ಹೇಳಿದಂತೆ ಕೆಲವು ಸಿದ್ಧಾಂತಕಾರರು ವಿಕಾಸವು ಹಂತ ಹಂತವಾಗಿ ಆಗುತ್ತದೆ ಎಂದು ಪ್ರತಿಪಾದಿಸಿದ್ದಾರೆ. ಮಕ್ಕಳು ಹಲವು ಹಂತಗಳ ಸರಣಿಯಲ್ಲಿ (ನಿಗದಿತ ವಯಸ್ಸಿನಲ್ಲಿ), ಪ್ರತಿ ಹಂತವೂ ವಿಶಿಷ್ಟ ಬೆಳವಣಿಗೆಯ ಲಕ್ಷಣಗಳನ್ನೊಳಗೊಂಡು, ಕಾರ್ಯ ಚಟುವಟಿಕೆಯ ಅತ್ಯುನ್ನತ ಹಂತವನ್ನು ತಲುಪುವವರೆಗೆ ಬೆಳೆಯುತ್ತಾರೆ. ಈ ಮಾದರಿಯ ವಿಕಾಸವನ್ನು ಗ್ರಾಫ್ ಮಾಡಿದರೆ ಅದು ಮೇಲೇರುವ ಮೆಟ್ಟಿಲನ್ನು ಹೋಲುತ್ತದೆ. ಇನ್ನೊಂದೆಡೆ, ವಿಕಾಸವು ಒಂದು ನಿರಂತರ ಪ್ರಕ್ರಿಯೆ ಎಂದು ನೋಡುವ ಸಿದ್ಧಾಂತಕಾರರೂ ಇದ್ದಾರೆ. ಅವರ ಪ್ರಕಾರ ವಯಸ್ಕರು ಬಾಹ್ಯ ಪ್ರಪಂಚಕ್ಕೆ ಪ್ರತಿಕ್ರಿಯಿಸುವ ರೀತಿಯಲ್ಲೇ ಮಕ್ಕಳೂ ಪ್ರತಿಕ್ರಿಯಿಸುತ್ತಾರೆ, ಆದರೆ ಅವರ ವಿಧಾನಗಳು ಪರಿಮಾಣಾತ್ಮಕವಾಗಿ ಅಥವಾ ಸಂಕೀರ್ಣತೆಯ ಮಟ್ಟದಲ್ಲಿ ಭಿನ್ನವಾಗಿರಬಹುದು. ಆದ್ದರಿಂದ, ವಿಕಾಸದ ಪ್ರಕ್ರಿಯೆಯು ಸಾಮಾನ್ಯವಾಗಿ ಮೊದಲಿನಿಂದಲೇ ಇದ್ದ ಕೌಶಲಗಳಿಗೆ ಕ್ರಮೇಣವಾಗಿ ಮತ್ತಷ್ಟು ಸೇರಿಸುತ್ತಾ ಹೋಗುವುದು ಎಂದು ಈ ಸಿದ್ಧಾಂತಕಾರರು ನಂಬುತ್ತಾರೆ. ಅವರು ವಿಕಾಸದ ವಕ್ರರೇಖೆಯನ್ನು ಮೇಲ್ಮುಖವಾಗಿ ಒರೆಯಾದ ಸತತ ವಕ್ರರೇಖೆ ಎಂದು ತೋರಿಸುತ್ತಾರೆ (**Berk, 2006).**

**ಒಂದು ಕ್ರಮದ ವಿಕಾಸ ಅಥವಾ ಹಲವು ಕ್ರಮಗಳ ವಿಕಾಸ:**

ಮಕ್ಕಳ ವಿಕಾಸವು ಹಂತಾನುಹಂತವಾಗಿ ಆಗುತ್ತದೆ ಎಂದು ಹೇಳುವ ಸಿದ್ಧಾಂತಕಾರರ ಪ್ರಕಾರ ಪ್ರಪಂಚದಾದ್ಯಂತ ಮಕ್ಕಳು ಒಂದೇ ರೀತಿಯ ಅನುಕ್ರಮ ಬೆಳವಣಿಗೆಯನ್ನು ಅನುಸರಿಸುತ್ತಾರೆ. ಈ ಸಿದ್ಧಾಂತಕಾರರು ವಿಕಾಸದ ಮೇಲೆ ಪ್ರಭಾವ ಬೀರುವ ಸಾಮಾನ್ಯ ಜೈವಿಕ ಮತ್ತು ಪರಿಸರದ ಅಂಶಗಳನ್ನು ಗುರುತಿಸಲು ಪ್ರಯತ್ನಿಸುತ್ತಾರೆ. ಆದರೆ, ಎಲ್ಲಾ ಮಕ್ಕಳಲ್ಲೂ ಇರುವಂತಹ ವಿಕಾಸದ ಸಾಮಾನ್ಯ ಅನುಕ್ರಮವನ್ನು ಗುರುತಿಸುವುದು ಕಷ್ಟ, ಏಕೆಂದರೆ ವಿಕಾಸದ ಗತಿ, ವಿಧಾನ ಮತ್ತು ಸಂದರ್ಭಗಳು ಭಿನ್ನವಾಗಿರುತ್ತವೆ ಎಂದು ಇತರರು ವಾದಿಸುತ್ತಾರೆ. ಉದಾಹರಣೆಗೆ, ಕೆಲವು ಸಮಾಜದ ಒಂದು ನಿರ್ದಿಷ್ಟ ವಯಸ್ಸಿನ ಮಕ್ಕಳು ಅದೇ ವಯಸ್ಸಿನ ಇತರ ಸಮಾಜದ ಮಕ್ಕಳಿಗಿಂತ ಗಣಿತದಲ್ಲಿ ಹೆಚ್ಚು ಪ್ರವೀಣರಾಗಿರುವುದನ್ನು ಕೆಲವು ಸಂಶೋಧನೆಗಳು ತೋರಿಸಿವೆ.

ಈ ಚರ್ಚೆಗಳ ಜೊತೆಗೆ, ವಿಕಾಸವನ್ನು ಅರ್ಥ ಮಾಡಿಕೊಂಡಿರುವ ಕೆಲವು ನಿಗದಿತ ವಿಚಾರಗಳು ಹೆಚ್ಚು **ಒಪ್ಪಿಕೊಳ್ಳುವಂತವಾಗಿವೆ**. ಅವುಗಳಲ್ಲಿ ಕೆಲವನ್ನು ಈ ಕೆಳಗೆ ಕೊಡಲಾಗಿದೆ.

### 5.7 **ವಿಕಾಸವನ್ನು ಅರ್ಥ ಮಾಡಿಕೊಳ್ಳುವಲ್ಲಿರುವ ಕೆಲವು ಸಮಾನಾಂಶಗಳು**:

ವಿಕಾಸದ ಪ್ರಕ್ರಿಯೆಯನ್ನು ಅ**ರ್ಥ ಮಾಡಿ**ಕೊಂಡಿರುವ ವಿಚಾರಗಳು ಮತ್ತು ಸಂಶೋಧನೆಗಳನ್ನು ವಿಶ್ಲೇಷಿಸಿದಾಗ, ಅವುಗಳು ಈ ಪ್ರಕ್ರಿಯೆ ಬಗ್ಗೆ ಕೆಲವು ಮೂಲಭೂತ ವಿಚಾರಗಳಲ್ಲಿ ಒಮ್ಮತ ವ್ಯಕ್ತಪಡಿಸಿರುವುದು ಕಾಣುತ್ತದೆ.

- ಅದು ಒಂದು ಅನುಕ್ರಮವಾದ ಮತ್ತು ಕ್ರಮಬದ್ಧ ಪ್ರಕ್ರಿಯೆ. ಉದಾಹರಣೆಗೆ, ಕೈ-ಕಣ್ಣುಗಳ ಸಮನ್ವಯತೆಯ ಬೆಳವಣಿಗೆಯಾದ ನಂತರವೇ ಮಗು ಕೈಚಾಚಿ ವಸ್ತುಗಳನ್ನು ಹಿಡಿದುಕೊಳ್ಳಲು ಸಾಧ್ಯ. ಇದು ಒಂದು ಸಮಗ್ರ ಪ್ರಕ್ರಿಯೆ (ಮತ್ತು ಪರಿಕಲ್ಪನೆ), ತುಂಡು ತುಂಡಾಗಿರುವುದಲ್ಲ. ವಿಕಾಸದ ಎಲ್ಲಾ ಆಯಾಮಗಳು (ದೈಹಿಕ, ಸಂಜ್ಞಾನಾತ್ಮಕ ಮತ್ತು ಮನೋ-ಸಾಮಾಜಿಕ) ಪರಸ್ಪರ ಸಂಬಂಧಿಸಿವೆ. ಉದಾಹರಣೆಗೆ, ಭಾಷಾ ಬೆಳವಣಿಗೆಯು ಈ ಎಲ್ಲಾ ಆಯಾಮಗಳಿಗೆ ಒಂದಲ್ಲ ಒಂದು ರೀತಿಯಲ್ಲಿ ಸಂಬಂಧಿಸಿದೆ.

- ಬೆಳವಣಿಗೆಯು ಮಗುವನ್ನು ಪಾರತಂತ್ರ್ಯದಿಂದ ಸ್ವಾಯತ್ತತೆಯೆಡೆಗೆ ನಡೆಸುತ್ತದೆ. ಅಂದರೆ, ಮಗು ಬೆಳೆಯುತ್ತಾ ಹೋದಂತೆ ಇತರರ ಮೇಲಿನ ಅವಲಂಬನೆಯು ಕಡಿಮೆಯಾಗುತ್ತದೆ.

- ಅದು ಹೆಚ್ಚಿನ ಸಂಕೀರ್ಣತೆಗೆ ಮತ್ತು ವೈವಿಧ್ಯತೆಗೆ ದಾರಿ ಮಾಡಿಕೊಡುತ್ತದೆ. ಉದಾಹರಣೆಗೆ, ಮಗು ಬೆಳೆಯುತ್ತಾ ಹೋದಂತೆ ಹೆಚ್ಚು ಸಂಕೀರ್ಣವಾದ ಸಮಸ್ಯಾಪೂರಣ (problem solving) ಕಾರ್ಯಗಳನ್ನು ಸಣ್ಣವಯಸ್ಸಿಗಿಂತ ಹೆಚ್ಚು ಸಹಜವಾಗಿ ಮಾಡಲು ಸಾಧ್ಯವಾಗುತ್ತದೆ. ಮನುಷ್ಯನ ಬೆಳವಣಿಗೆ ಆಗುತ್ತಾ ಹೋದಂತೆ, ಅವಶ್ಯಕತೆ, ವರ್ತನೆ, ನಿಲುವು, ಕೌಶಲಗಳು, ಆಸಕ್ತಿಗಳು ಮುಂತಾದವುಗಳಿಗೆ ಅನುಗುಣವಾಗಿ ಹೆಚ್ಚಿನ ವ್ಯತ್ಯಾಸಗಳು ಹೊರಹೊಮ್ಮುತ್ತವೆ.

- ಮನುಷ್ಯನ ಬೆಳವಣಿಗೆಯು ಜಾಗತಿಕವಾಗಿ ಬೇರೆ ಬೇರೆ ಗತಿಯಲ್ಲಿ ಆಗುತ್ತದೆ. ವಿಭಿನ್ನ ಸಂಸ್ಕೃತಿಗಳು, ಸಾಮಾಜೀಕರಣದ ಮಾದರಿಗಳು, ಪೌಷ್ಟಿಕಾಂಶ, ಆರೋಗ್ಯ

ಮತ್ತು ಶಿಕ್ಷಣ, ಆಹಾರ ಪದ್ಧತಿಗಳು, ಹವಾಮಾನ ಸ್ಥಿತಿ ಹಾಗೂ ಆಂತರಿಕ ಅಂಶಗಳು ಮಾನವನ ಬೆಳವಣಿಗೆ ಹಾಗೂ ಜೀವನದಲ್ಲಿ ವೈವಿಧ್ಯತೆಯನ್ನುಂಟುಮಾಡುತ್ತವೆ.

• ವಿಶೇಷ ಅವಶ್ಯಕತೆಗಳಿರುವ ಮಕ್ಕಳ (children with special needs) ಬೆಳವಣಿಗೆಯನ್ನು ಬೇರೆ ರೀತಿಯಲ್ಲಿಯೇ ಅರಿತುಕೊಳ್ಳಬೇಕಾದ ಅವಶ್ಯಕತೆಯಿದೆ.

-----------------------------------------------------------

ನಿಮ್ಮ ಪ್ರಗತಿಯನ್ನು ಗುರುತಿಸಿಕೊಳ್ಳಿ:

**5.** ವಿಕಾಸದ ಬಗ್ಗೆ ಇರುವ ಕೆಲವು ಸಾಮಾನ್ಯಾಂಶಗಳನ್ನು ಪಟ್ಟಿ ಮಾಡಿ.

.......................................................................................................................................

.......................................................................................................................................

.......................................................................................................................................

..................-----------------------------------------------------------

ಶಿಕ್ಷಕರಾಗಿ ನಾವು, ಬೆಳೆಯುತ್ತಿರುವ ಕಲಿಯುತ್ತಿರುವ ಮತ್ತು ವಿಕಾಸ ಹೊಂದುತ್ತಿರುವ ಬೇರೆ ಬೇರೆ ರೀತಿ ಇರುವ ವಿದ್ಯಾರ್ಥಿಗಳೊಡನೆ ಬೆರೆಯುತ್ತೇವೆ. ವಿಕಾಸದ ಬಗ್ಗೆ ನಮ್ಮ ಈ ತಿಳಿವಳಿಕೆಯು ವಿದ್ಯಾರ್ಥಿಗಳನ್ನು ಅರ್ಥ ಮಾಡಿಕೊಳ್ಳಲು ಮತ್ತು ಉತ್ತಮ ಶಿಕ್ಷಕರಾಗಿ ಕೆಲಸ ಮಾಡಲು ಸಹಾಯಕವಾಗುತ್ತದೆ. ಆದರೆ, ಮಕ್ಕಳನ್ನು ಹಾಗೂ ಅವರ ಬೆಳವಣಿಗೆಯನ್ನು ಅ**ರ್ಥ ಮಾಡಿ**ಕೊಳ್ಳಲು ಒಂದೇ ವಿಧಾನವಿಲ್ಲ ಎಂಬುದನ್ನು ಮೆಚ್ಚಿಕೊಳ್ಳಬೇಕು. ಪ್ರತಿಯೊಬ್ಬ ಶಿಕ್ಷಕರೂ ತಾ**ವು** ಕೆಲಸ ಮಾಡುತ್ತಿರುವ ಸನ್ನಿವೇಶದಲ್ಲಿನ ತನ್ನ ಅನುಭವಗಳ ಆಧಾರದಲ್ಲಿ ಬೇರೆ ಬೇರೆ ತಿಳಿವಳಿಕೆಗಳನ್ನು ಪಡೆಯುತ್ತಾರೆ. ಇಲ್ಲಿ ಕೊಟ್ಟಿರುವ ವಿವರಣೆಗಳು ಶಿಕ್ಷಕರಿಗೆ ತಮ್ಮ ಅನುಭವಗಳ ವಿಶ್ಲೇಷಣೆ ಮಾಡಲು ಸಹಾಯಕವಾಗುತ್ತವೆ ಎಂದು ನಿರೀಕ್ಷಿಸಲಾಗಿದೆ. ಮುಂದಿನ ವಿಭಾಗಗಳು ಈ ಆಧಾರದ ಮೇಲೆ ರಚಿತವಾಗಿದ್ದು, ವಿಕಾಸದ ವಿವಿಧ ದೃಷ್ಟಿಕೋನಗಳನ್ನು ವಿಸ್ತಾರವಾಗಿ ವಿವರಿಸುತ್ತವೆ.

### 5.8 **ಉಪಸಂಹಾರ**

ಈ ವಿಭಾಗದಲ್ಲಿ ಶಿಶು ಮತ್ತು ಶೈಶವ ಎಂಬ ಪರಿಕಲ್ಪನೆಗಳನ್ನು ಪರಿಚಯ ಮಾಡಿಕೊಂಡಿದ್ದೇವೆ. ಶಿಶು ಮತ್ತು ಶೈಶವವನ್ನು ವ್ಯಾಖ್ಯಾನಿಸುವಲ್ಲಿ ಏಕಾಭಿಪ್ರಾಯ ಇಲ್ಲ. ಈ ಬರಹವನ್ನು ಓದುವ ಮೂಲಕ ಮಕ್ಕಳು ಎಂಬುದರ ಅರ್ಥ ಮತ್ತು

ವಿವರಣೆಗಳು ಐತಿಹಾಸಿಕವಾಗಿ, ಕಾಲಾನುಕಾಲಕ್ಕೆ ಬದಲಾಗುತ್ತವೆ ಎಂಬುದನ್ನು ತಿಳಿದುಕೊಳ್ಳಬಹುದು.

ವಿಕಾಸ/ಬೆಳವಣಿಗೆಯು ಮಾನವನಲ್ಲಿ ಗರ್ಭಧಾರಣೆಯಿಂದ ಸಾವಿನವರೆಗೆ ಆಗುವ ಕೆಲವು ಬದಲಾವಣೆಗಳನ್ನು ಸೂಚಿಸುತ್ತದೆ. ದೈಹಿಕ, ಸಂಜ್ಞಾನಾತ್ಮಕ, ಭಾವನಾತ್ಮಕ, ಸಮಾಜೋ-ಸಾಂಸ್ಕೃತಿಕ ಮತ್ತು ನೈತಿಕ ಬೆಳವಣಿಗೆಗಳು ವಿಕಾಸದ ವಿವಿಧ ಆಯಾಮಗಳು. ಬೆಳವಣಿಗೆಯು (growth) ವಿಕಾಸಕ್ಕಿಂತ (development) ಭಿನ್ನವಾದುದು. ಮಕ್ಕಳ ವಿಕಾಸವನ್ನು ಅರ್ಥಮಾಡಿಕೊಳ್ಳುವುದರಿಂದ ಶಿಕ್ಷಕರಿಗೆ ತಮ್ಮ ವಿದ್ಯಾರ್ಥಿಗಳನ್ನು ಅರಿತುಕೊಳ್ಳಲು ಮತ್ತು ಅವರನ್ನು ಸಮರ್ಥವಾಗಿ ನಿಭಾಯಿಸಲು ಸಹಾಯವಾಗುತ್ತದೆ.

5.9 ಅಭ್ಯಾಸಗಳು

**1.** ಈ ಪಠ್ಯ ವಿಭಾಗದ ಕಲಿಕೆಯು ಶಿಕ್ಷಕರಿಗೆ ಹೇಗೆ ಸಹಾಯಕವಾಗಬಹುದು**?**

**2.** ನಿಮ್ಮ ವೈಯಕ್ತಿಕ ಬೆಳವಣಿಗೆಯ ಅನುಭವಗಳು ಹಾಗೂ ವಿದ್ಯಾರ್ಥಿಗಳ ಜೊತೆಗಿನ ನಿಮ್ಮ ಅನುಭವಗಳ ಆಧಾರದ ಮೇಲೆ “ಬಾಲ್ಯಾವಧಿಯ ಅನುಭವ” ಎಂಬ ವಿಷಯದ ಮೇಲೆ ಒಂದು ಪುಟ್ಟ ಪ್ರಬಂಧ ಬರೆಯಿರಿ.

***